

## ಪದಬಂಧ 9-6-2011ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಆಪಾದನೆ; 3. ಹೊರತು; 4. ನರ್ತನ; 6. ರಕ್ತಗೆಂಪು; 7. ನೂಪುರ; 9. ಮಸುಕು; 11. ನಮಿಸು; 13. ನಗರಿ; 15. ಅತಿರೇಕ; 17. ನಳಿನ; 18. ಪಾರ್ಥಿವ; 19. ತಿಮಿಂಗಿಲ.

**ಮೇಲಿಂದ ಕೆಳಕ್ಕೆ:**

1. ಆತುರ; 2. ನೆನಪು; 3. ಹೊಳಪು; 5. ನನಸು; 7. ನೂತನ; 8. ರಚಿಸು; 9. ಮರ್ದನ; 10. ಕುವರಿ; 12. ಮಿಲನ; 14. ಗಡವ; 15. ಅನತಿ; 16. ಕಪಾಲ.

---

ಎಡದಿಂದ ಬಲಕ್ಕೆ:

1. ವಂದಿಸಬಂದವನ ಬಗೆಗೂ ತಾತ್ಸಾರವೇ? (4)
3. ವಾದ್ಯ ವಿಧಗಳ ಬಗೆಗೆ ಭಿನ್ನಾಭಿಪ್ರಾಯ-ಚರ್ಚೆ (3)
4. ಆ ಮರದ ಹಣ್ಣು ಬಹಳ ಸಿಹಿ (3)
6. ಹೀನರ ಸಹವಾಸದಲ್ಲಿ ರುಚಿಯೇ ಇಲ್ಲ (4)
7. ಅತ್ತ ಭೀಮನನ್ನೇ ತರಬೇಕೆಂಬ ಆಲೋಚನೆ ಇದೆ (4)
8. ವೀತರಾಗನಾಗಿದ್ದರೂ ಆತನಿಗೆ ವಾಯುಸಂಬಂಧಿ ಕಾಯಿಲೆ (4)
10. 'ಕಪ್ಪು ಜಲ'-ಕಡಲಾಚೆ ಕಳುಹುತ್ತಿದ್ದ ಶಿಕ್ಷೆ (4)
12. ಪರಮ ಭಕ್ತ ಎಂದರೂ ಒಂದು ಎಲ್ಲೆ ಇದೆ (4)
14. 'ಮೆಣಸಿನ ರುಚಿಯ ಮನೆ' – ಅದು ಜೈಲು (4)
16. ವರುಣನ ಶಕ್ತಿಯ ಬಣ್ಣ ಬಣ್ಣ ವಿವರಣೆ (3)
17. ಸುಳ್ಳನ್ನು ಬಳಸಿ ಅಲ್ಲೇ ತೂರಿಕೋ (3)
18. ರೋಮಾಂಚನ ಮತ್ತೆ ತಂದ ಶ್ರೇಷ್ಠ ಮನುಷ್ಯ (4)

ಮೇಲಿಂದ ಕೆಳಕ್ಕೆ:

1. ಉದ್ಧಾರ ಮಾಡುವುದಿಲ್ಲ ಬಿಡಿ ಈ ಹೊಟ್ಟೆ (3)
2. ಮುನಿಯನ್ನ ಕಂಡೊಡನೆ ನಮಸ್ಕಾರ (3)
3. ಅ ನಿಯಮ-ಈ ನಿಯಮ ಅದಲು ಬದಲು (4)
5. ಕ್ಷೀರ ತರುವ ವಾಹನ ಕಾವಲಿನಲ್ಲಿದೆ (3)
7. ಆ ರಾಜ್ಯಕ್ಕೆ ಯಾರೂ ಮುಂದಾಳೇ ಇಲ್ಲ (4)
9. ಗಾಣ ಕಡಿದ ಗುಂಪಿಗೆ ಯಜಮಾನ- ಜನಪ್ರಿಯ ದೇವರೇ? (4)
11. ನೀವಿರುವಲ್ಲಿ ಕಿಂಚಿತ್ತೂ ಶಬ್ದ ಇಲ್ಲ (3)
13. ಹಗ್ಗ ಎಳೆವವರಿಗೆ ಉಪ್ಪು ಖಾರದ ಕುರುಕಲು ಧಾನ್ಯ ಮಿಶ್ರಣ (4)
14. ಕನ್ಯಾದಾನದ ನಂತರ ಕಂಡದ್ದು ದಟ್ಟಡವಿ (3)
15. ಹಣ್ಣು ಮುದುಕನ ಮನದಲ್ಲಿ ಸದಾ ಮಾರುತಿ (3)

**ಲೋಹ ಪ್ರಪಂಚ**

# ಬೆಳ್ಳಗಿರುವುದೆಲ್ಲ ಬೆಳ್ಳಿ ಅಲ್ಲ..!

ಬೆಳ್ಳಿ-ಅದೊಂದು 'ರಾಜಲೋಹ' ವಿರಳ ಲೋಹಗಳಲ್ಲೆಲ್ಲ ಶ್ರೇಷ್ಠತೆಯಲ್ಲಿ, ಉಪಯುಕ್ತತೆಯಲ್ಲಿ, ಜನಪ್ರಿಯತೆಯಲ್ಲಿ ಅದರದು ದ್ವಿತೀಯ ಸ್ಥಾನ; ಬಂಗಾರದ ನಂತರದ ಸ್ಥಾನ. ಭೂ ನೆಲದಲ್ಲಿ ಬೆಳ್ಳಿ ಪರಿಶುದ್ಧ ಗಟ್ಟಿಗಳ ರೂಪದಲ್ಲೂ (ಚಿತ್ರ ನೋಡಿ), ಇತರ ಕೆಲ ಲೋಹ-ಅಲೋಹಗಳೊಡನೆ ಬೆರೆತು ಅದಿರುಗಳ ರೂಪದಲ್ಲೂ ಲಭಿಸುತ್ತದೆ. ಬೆಳ್ಳಿಯ ಪ್ರಧಾನ ಅದಿರುಗಳು ಅರ್ಜಂಟೈಟ್, ಪೈರಗೈರೈಟ್ ಮತ್ತು ಸ್ಟೀಫನೈಟ್. ಯು.ಎಸ್.ಎ. ಮತ್ತು ಮೆಕ್ಸಿಕೋ ದೇಶಗಳಲ್ಲಿ ಬೆಳ್ಳಿ ನಿಕ್ಷೇಪಗಳು ಗರಿಷ್ಠ.

ಬೆಳ್ಳಿಯ ಶ್ರೇಷ್ಠ ಗುಣಗಳು ಹಲವಾರು. ಅವಕ್ಕನುಗುಣವಾಗಿ ವಿಧ ವಿಧ ವಿಶಿಷ್ಟ ಬಳಕೆಗಳು ಕೂಡ. ಬೆಳ್ಳಿಯದು ಉಜ್ವಲ ಹೊಳಪಿನ ಸುಂದರ ರೂಪ; ಸಾಂದ್ರ ಸ್ವರೂಪ (ಸಾಪೇಕ್ಷ ಸಾಂದ್ರತೆ 10.5); ಅತ್ಯುತ್ತಮ ತಾಪ ನಿರೋಧಕ ಶಕ್ತಿ (ಕರಗುವ ಬಿಂದು 961.5 ಡಿಗ್ರಿ ಸೆಲ್ಸಿಯಸ್); ತುಕ್ಕು ಹಿಡಿಯದ ಗುಣ. ತಾಂತವತೆ ಮತ್ತು ಪತ್ರಶೀಲತಾ ಸಾಮರ್ಥ್ಯಗಳಲ್ಲಿ ಬಂಗಾರದ ನಂತರದ ಸ್ಥಾನ. ಒಂದು ಗ್ರಾಂ ಬೆಳ್ಳಿಯನ್ನು ಎರಡು ಕಿ.ಮೀ. ಉದ್ದದ ತಂತಿಯಾಗಿಸಬಹುದು; ಈ ಲೋಹವನ್ನು 0.00003 ಸೆಂಮೀನಷ್ಟೇ ದಪ್ಪದ ತೆಳ್ಳನ್ನ ಪಾರದರ್ಶಕ ಹಾಳೆಯನ್ನಾಗಿ ತಟ್ಟಬಹುದು. ಇವೆಲ್ಲ ಗುಣಗಳಿಂದಾಗಿ ಬೆಳ್ಳಿ ಪದಕ-ಪಾರಿತೋಷಿಕಗಳಿಗೆ, ನಾಣ್ಯ, ದೀಪ, ವಿಗ್ರಹಗಳಿಗೆ,



ಆಭರಣ-ಕಲಾಕೃತಿಗಳಿಗೆ, ತಟ್ಟೆ-ಲೋಟ-ಬಟ್ಟಲುಗಳಿಗೂ ಪ್ರಶಸ್ತವಾಗಿದೆ. ದೂರದರ್ಶಕ, ಸೂಕ್ಷ್ಮದರ್ಶಕಗಳಿಗೆ ಅತ್ಯವಶ್ಯವಾದ ಗರಿಷ್ಠ ಪ್ರತಿಫಲಿಸುವ ದರ್ಪಣಗಳಿಗೂ ಬೆಳ್ಳಿ ಅತ್ಯಂತ ಸೂಕ್ತ.

ಬೆಳ್ಳಿಯದು ಅದ್ವಿತೀಯ ಶಾಖ ಮತ್ತು ವಿದ್ಯುದ್ವಾಹಕ ಸಾಮರ್ಥ್ಯ. ಹಾಗಾಗಿ ಎಷ್ಟೇ ಸಲ, ಎಷ್ಟು ಕಾಲ ಬಳಸಿದರೂ ಸವೆಯದ, ಸಂಪರ್ಕ ಕಳೆದುಕೊಳ್ಳದ ಸ್ವಿಚ್‌ಗಳು- ವಿದ್ಯುತ್ ಬಂಧಗಳು ಅಗತ್ಯವಿರುವ ಸಾಧನಗಳಲ್ಲಿ (ಉದಾ: ಕಂಪ್ಯೂಟರ್ ಜಲಾಂತರ್ಗಾಮಿ ಬೈಜಿಕ ಸ್ಥಾವರ ಇತ್ಯಾದಿ) ಬೆಳ್ಳಿಯದು ಭಾರೀ ಬಳಕೆ. ಬೆಳ್ಳಿಗೆ ಬ್ಯಾಕ್ಟೀರಿಯಾ ನಾಶಕ ಗುಣವೂ ಇದೆ. ಒಂದು ಗ್ರಾಂನ ಶತಕೋಟಿಯಲ್ಲೊಂದೇ ಭಾಗ ಬೆಳ್ಳಿ ಒಂದು ಲೀಟರ್ ನೀರನ್ನು ರೋಗಾಣು ರಹಿತವಾಗಿಸಬಲ್ಲದು.

ಕೆಲವಾರು ಸಂಯುಕ್ತಗಳ ರೂಪದಲ್ಲೂ ಬೆಳ್ಳಿ ಅತ್ಯುಪಯುಕ್ತ. ಫೋಟೋಗ್ರಫಿಯಲ್ಲಿ 'ಬೆಳ್ಳಿಯ ಬ್ರೋಮೈಡ್', ಕೃತಕ ಮಳೆ ಬರಿಸಲು 'ಬೆಳ್ಳಿಯ ಅಯೋಡೈಡ್', ವೈದ್ಯಕೀಯ-ದಂತ ವೈದ್ಯಕೀಯದಲ್ಲಿ 'ಬೆಳ್ಳಿಯ ನೈಟ್ರೇಟ್' ಅಂಥ ಉಪಯೋಗಗಳಿಗೆ ಉದಾಹರಣೆಗಳು. ಲಾಭಕ್ಕಾಗಿ ಹಣ ತೊಡಗಿಸುವ ವ್ಯವಹಾರಗಳಲ್ಲೂ ಬೆಳ್ಳಿಗೆ ಜಗದಾದ್ಯಂತ ವಿಪರೀತ ಬೇಡಿಕೆ ಇದೆ.

■ ಎನ್. ವಾಸುದೇವ್